# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2504 |
| ಸದಸ್ಯರ ಹೆಸರು | : | ಶ್ರೀ ಅರವಿಂದ ಕುಮಾರ್ ಅರಳಿ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 23-03-2022. |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲ್ಯಾಣ ಕರ್ನಾಟಕ ವಿಭಾಗದಲ್ಲಿ ಒಟ್ಟು ಟೋಲ್ ಗೇಟ್‌ಗಳ ಸಂಖ್ಯೆ ಎಷ್ಟು; (ಕಂಪನಿ ಸಹಿತ ಪೂರ್ಣ ಮಾಹಿತಿ ನೀಡುವುದು) | ಕಲ್ಯಾಣ ಕರ್ನಾಟಕ ವಿಭಾಗದ ರಾಷ್ಟ್ರೀಯ ಹೆದ್ದಾರಿ ವಲಯದ ವ್ಯಾಪ್ತಿಯಲ್ಲಿ ಯಾವುದೇ ಟೋಲ್‌ಗೇಟ್ ಇರುವುದಿಲ್ಲ. ಆದರೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುವಂತೆ, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಕಲ್ಯಾಣ ಕರ್ನಾಟಕ ವಿಭಾಗದಡಿ ಈ ಕೆಳಕಂಡ ಟೋಲ್ ಗೇಟ್‌ಗಳು ಇರುತ್ತವೆ.<br>1. ರಾಷ್ಟ್ರೀಯ ಹೆದ್ದಾರಿ-50 ಹರ್ವಾಲ್ ಟೋಲ್ ಪ್ಲಾಜಾ (ಕಲಬುರಗಿ ಜಿಲ್ಲೆ), ಬಿಜಾಪುರ-ಗುಲ್ಬರ್ಗಾ-ಹುಮ್ನಾಬಾದ್ : ಸೋನುಕುಮಾರ್ ಟೋಲ್ ಶುಲ್ಕ ಗುತ್ತಿಗೆದಾರರು.<br>2. ರಾಷ್ಟ್ರೀಯ ಹೆದ್ದಾರಿ-65ರ ಮಂಗಲಗಿ ಟೋಲ್ ಪ್ಲಾಜಾ (ಬೀದರ್‌ಜಿಲ್ಲೆ) ಮೆ: ಎಲ್ ಅಂಡ್ ಟಿ ಡೆಕ್ಕನ್ ಟೋಲ್‌ವೇ ಲಿಮಿಟೆಡ್-MH/KN ಬಾರ್ಡರ್. ಸಂಗಾರೆಡ್ಡಿ, ಗುತ್ತಿಗೆದಾರರು.<br><br>ಕಲ್ಯಾಣ ಕರ್ನಾಟಕದ ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ಒಳಪಡುವ ಬಳ್ಳಾರಿ ಜಿಲ್ಲೆಯ ಬಳ್ಳಾರಿ ವಿಭಾಗದಲ್ಲಿ 01 ಟೋಲ್ ಗೇಟ್ ಇರುತ್ತದೆ. ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನಲ್ಲಿ ಸಂಡೂರು ಪಟ್ಟಣಕ್ಕೆ ಬೈಪಾಸ್ ರಸ್ತೆಯನ್ನು PPP ಹಾಗೂ BOT Toll Model ಆಧಾರದ ಮೇಲೆ ಅಭಿವೃದ್ಧಿಗೊಳಿಸಿದ್ದು ಸಂಬಂಧಿಸಿದ Concessionair ರಾದ M/s.SBPL ರವರು ಟೆಂಡರ್ ಕರಾರು ಹಾಗೂ ಸರ್ಕಾರದ ಆದೇಶದಂತೆ ಶುಲ್ಕವನ್ನು ಸಂಗ್ರಹಿಸುತ್ತಿರುವರು, ಸದರಿ ಟೋಲ್ ಪ್ಲಾಜವು ಖಾಸಗಿ ನಿರ್ವಹಣೆಯಲ್ಲಿರುತ್ತದೆ.<br><br>ಕೆ.ಆರ್.ಡಿ.ಸಿ.ಎಲ್. ವತಿಯಿಂದ ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವ / (PPP Project) (Viability Gap Funding) ಪಾಲುದಾರಿಕೆ ಯೋಜನೆ ಅಡಿ ಯಲ್ಲಿ ಈ ಕೆಳಕಂಡ ರಾಜ್ಯ ಹೆದ್ದಾರಿಗಳ ಅಭಿವೃದ್ಧಿ ಪಡಿಸಲಾಗಿದೆ ಕಲ್ಯಾಣ ಕರ್ನಾಟಕ ವಿಭಾಗದಲ್ಲಿ ಈ ಕೆಳಕಂಡ 2 ಯೋಜನಾ ರಸ್ತೆಗಳನ್ನು ಪಿಪಿಪಿ-ಬಿಒಟಿ/ಡಿಬಿಎಫ್‌ಒಟಿ-ವಿಜಿಎಫ್ (ಟೋಲ್) ಆಧಾರದಲ್ಲಿ ಅಡಿಯಲ್ಲಿ ನಿರ್ಮಿಸಲಾಗಿದೆ. ಸರ್ಕಾರದ ಆದೇಶದಂತೆ ಸದರಿ 2 ರಸ್ತೆಗಳಲ್ಲಿ ರಿಯಾಯಿತಿದಾರರು ನಿರ್ಧಿಷ್ಟ ಅವಧಿಯವರೆಗೆ ಶುಲ್ಕ ಸಂಗ್ರಹಣೆ |

ಮಾಡಲಾಗುತ್ತಿದೆ ಹಾಗೂ ಸದರಿ 2 ರಸ್ತೆಗಳಲ್ಲಿ ಒಟ್ಟು 6 ಸಂಖ್ಯೆ ಟೋಲ್ ಗೇಟ್‌ಗಳು ಇರುತ್ತದೆ.

1. ವಾಗ್ಧಾರಿ-ರಿಬ್ಬನ್‌ಪಲ್ಲಿ ರಸ್ತೆ ಅಗಲೀಕರಣ ಮತ್ತು ಅಭಿವೃದ್ಧಿ ಕಾಮಗಾರಿ ಪಿಪಿಪಿ-ಬಿ.ಓ.ಟಿ-ವಿ.ಜಿ.ಎಫ್ (ಶುಲ್ಕ) ಆಧಾರದ ಅಡಿಯಲ್ಲಿ ಅಭಿವೃದ್ಧಿ.
   - ಒಟ್ಟಾರೆ ಯೋಜನಾ ಮೊತ್ತ ರೂ.242.75 ಕೋಟಿ
   - ಯೋಜನಾ ಮೊತ್ತ ರೂ.238.58 ಕೋಟಿ ( ಯೂಟಿಲಿಟಿ, ಸ್ಥಳಾಂತರ, ಕಂಟಿಜೆನ್ಸಿ ಹೊರತುಪಡಿಸಿ)
   - ಯೋಜನಾ ರಸ್ತೆಯ ಉದ್ದ : 135.85 ಕಿ.ಮೀ.
   - ರಿಯಾಯಿತಿದಾರರು : ಮೆ॥ ವಾಗ್ಧಾರಿ-ರಿಬ್ಬನ್‌ಪಲ್ಲಿ ಟೋಲ್ ವೇ ಪ್ರೈ.ಲೀ., ಬೆಂಗಳೂರು.
   - ರಿಯಾಯಿತಿದಾರರ ಯೋಜನಾ ಮೊತ್ತ : ರೂ.314.31 ಕೋಟಿ
   - ಅನುಮೋದಿತ ವಿಜಿಎಫ್ ಮೊತ್ತ : ರೂ.90.66 ಕೋಟಿ (38% of TPC of Rs.238.58 Crore)
   - ಕೇಂದ್ರ ಸರ್ಕಾರದ ಪಾಲು : ರೂ.47.71 ಕೋಟಿ (20% of TPC of Rs.238.58 Crore)
   - ರಾಜ್ಯ ಸರ್ಕಾರದ ಪಾಲು : ರೂ.42.95 ಕೋಟಿ (18% of TPC of Rs.238.58 Crore)
   - ರಿಯಾಯಿತಿ ಅವಧಿ : 30 ವರ್ಷಗಳು (2 ವರ್ಷ ನಿರ್ಮಾಣ ಅವಧಿ ಮತ್ತು 28 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣಾ ಅವಧಿ)
   - ಪ್ರಸ್ತುತ ಯೋಜನಾ ರಸ್ತೆಯು ಕಾರ್ಯಾಚರಣೆ ಮತ್ತು ನಿರ್ವಹಣಾ ಅವಧಿಯಲ್ಲಿದೆ.
   - ಟೋಲ್ ಗೇಟ್ ಗಳ ವಿವರಗಳು

| ಟೋಲ್ ಗೇಟ್ ಗಳ ಸಂಖ್ಯೆ | ಕಿ.ಮೀ. |
|---|---|
| 1 | 7+290 (ಸರಸಾಂಬ ಹತ್ತಿರ) |
| 2 | 47+350 (ಪಟ್ಟಣ ಹತ್ತಿರ) |
| 3 | 81+900 (ಮಡಬಾಳ ಹತ್ತಿರ) |
| 4 | 124.550 (ಹೂಡ ಹತ್ತಿರ) |

2. ಗಿಣಿಗೇರಾ-ಗಂಗಾವತಿ-ಸಿಂಧನೂರು (ರಾ.ಹೆ-23) ರಲ್ಲಿ ಸರಪಳಿ.79+000 ರಿಂದ 162+000 ರವರೆಗೆ 83+000 ಕಿ.ಮೀ ಉದ್ದದ ರಸ್ತೆಯನ್ನು ಪಿಪಿಪಿ-ಡಿ.ಬಿ.ಎಫ್.ಓ.ಟಿ-ವಿಜಿಎಫ್-(ಶುಲ್ಕ) ಆಧಾರದಲ್ಲಿ ಅಭಿವೃದ್ಧಿ
   - ಯೋಜನಾ ಮೊತ್ತ ರೂ.190.160 ಕೋಟಿ
   - ಯೋಜನಾ ರಸ್ತೆಯ ಉದ್ದ : 83 ಕಿ.ಮೀ.
   - ರಿಯಾಯಿತಿದಾರರು: ಮೆ॥ ಸಿಂಧನೂರು ಗಂಗಾವತಿ ಟೋಲ್ ವೇ ಪ್ರೈ.ಲೀ., ಹೈದಾರಬಾದ್.
   - ರಿಯಾಯಿತಿದಾರರ ಯೋಜನಾ ಮೊತ್ತ: ರೂ.244.59 ಕೋಟಿ

- ಅನುಮೋದಿತ ವಿಜಿಎಫ್ ಮೊತ್ತ : ರೂ.4.59 ಕೋಟಿ (2.41% of TPC of Rs.190.16 Crore) – ಕೇಂದ್ರ ಸರ್ಕಾರ ಭರಿಸುವುದು.
- ರಿಯಾಯಿತಿ ಅವಧಿ : 24 ವರ್ಷಗಳು (2 ವರ್ಷ ನಿರ್ಮಾಣ ಅವಧಿ ಮತ್ತು 22 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣಾ ಅವಧಿ)
- ಪ್ರಸ್ತುತ ಯೋಜನಾ ರಸ್ತೆಯು ಕಾರ್ಯಾಚರಣೆ ಮತ್ತು ನಿರ್ವಹಣಾ ಅವಧಿಯಲ್ಲಿದೆ.
- ಟೋಲ್ ಗೇಟ್‌ಗಳ ವಿವರಗಳು

| ಟೋಲ್ ಗೇಟ್‌ಗಳ ಸಂಖ್ಯೆ | ಕಿ.ಮೀ. |
|---|---|
| 1 | 119.950 (ಮಾರಳಿ ಹತ್ತಿರ) |
| 2 | 141+000 (ಯಮ್ಮಿಗುಡ್ಡ ಹತ್ತಿರ) |

3. ಬೀದರ–ಚಿಂಚೋಳಿ (ರಾ.ಹೆ–15) ಕಿ.ಮೀ.47+360 ದಿಂದ 107+40 ವಿನ್ಯಾಸ, ನಿರ್ಮಾಣ, ಹಣಕಾಸು ಚಾಲನೆ, ನಿರ್ವಹಣೆ ಮತ್ತು ವರ್ಗಾವಣೆ (DBFOMT – Hybrid Annuity Basis) ಆಧಾರದ ಮೇಲೆ ವಿಶ್ವಬ್ಯಾಂಕ ನೆರವಿನೊಂದಿಗೆ ರಸ್ತೆ ಅಭಿವೃದ್ಧಿ.
   - ಒಟ್ಟಾರೆ ಅಂದಾಜು ನಿರ್ಮಾಣ ಮೊತ್ತ ರೂ. 180.56 ಕೋಟಿ
   - ಯೋಜನಾ ರಸ್ತೆಯ ಉದ್ದ : 60.04 ಕಿ.ಮೀ.
   - ರಿಯಾಯಿತಿದಾರರು: ಮೆ॥ ಡಿ.ಪಿ.ಜೈನ್ ಬೀದರ್–ಚಿಂಚೋಳಿ ಅನ್ಯೂಟಿ ರೋಡ್ ಪ್ರಾಜೆಕ್ಟ್ ಲಿಮಿಟೆಡ್, ನಾಗಪೂರ್.
   - ವಿಶ್ವ ಬ್ಯಾಂಕ್ ಸಾಲದ ನೆರವು: ರೂ. 36.19 ಕೋಟಿ (20% of EPC of Rs.180.56 Crore)
   - ದೇಶಿಯ ಬ್ಯಾಂಕ್ ಸಾಲದ ನೆರವು: ರೂ. 36.19 ಕೋಟಿ (20% of EPC of Rs.180.56 Crore)
   - ರಿಯಾಯಿತಿ ಅವಧಿ: 10 ವರ್ಷಗಳು (2 ವರ್ಷ ನಿರ್ಮಾಣ ಅವಧಿ ಮತ್ತು 8 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣಾ ಅವಧಿ)
   - ಪ್ರಸ್ತುತ ಯೋಜನಾ ರಸ್ತೆಯು ಕಾರ್ಯಾಚರಣೆ ಮತ್ತು ನಿರ್ವಹಣಾ ಅವಧಿಯಲ್ಲಿದೆ.
   - ಟೋಲ್ ಗೇಟ್‌ಗಳ ವಿವರಗಳು

| ಟೋಲ್ ಗೇಟ್‌ಗಳ ಸಂಖ್ಯೆ | ಕಿ.ಮೀ. |
|---|---|
| 1 | 59+400 (ಐನೊಳಿ) |
| 2 | 102+230 (ಕಾಂಠಾಣ) |

4. ವಿಶ್ವಬ್ಯಾಂಕ್ ಆರ್ಥಿಕ ನೆರವಿನ ಹೈಬ್ರೀಡ್ ಅನ್ಯೂಟಿ ಮಾದರಿಯ ಯೋಜನೆ ಅಡಿಯಲ್ಲಿ (DBFOMT – Annuity Basis) ಮುಂಡರಗಿ–ಹಡಗಲಿ–ಹರಪನಹಳ್ಳಿ ರಾಜ್ಯ ಹೆದ್ದಾರಿ–45 ಮತ್ತು 47 ರ ರಸ್ತೆ ಅಭಿವೃದ್ಧಿ ಕಾಮಗಾರಿ

<table>
<tr>
<td></td>
<td></td>
<td>
• ಒಟ್ಟಾರೆ ಅಂದಾಜು ನಿರ್ಮಾಣ ಮೊತ್ತ ರೂ. 164.13 ಕೋಟಿ<br>
• ಯೋಜನಾ ರಸ್ತೆಯ ಉದ್ದ : 51.211 ಕಿ.ಮೀ.<br>
• ರಿಯಾಯಿತಿದಾರರು : ಮೆ॥ ದಿ.ಬಿ.ಎಲ್ ಮುಂಡರಗಿ ಹರಪನಹಳ್ಳಿ ಟೋಲ್ ವೇಸ್ ಪ್ರೈ.ಲಿ, ಭೋಪಾಲ್, ಮಧ್ಯಪ್ರದೇಶ್<br>
• ವಿಶ್ವ ಬ್ಯಾಂಕ್ ಸಾಲದ ನೆರವು : ರೂ. 32.83 ಕೋಟಿ (20% of EPC of Rs. 164.13 Crore)<br>
• ದೇಶಿಯ ಬ್ಯಾಂಕ್ ಸಾಲದ ನೆರವು: ರೂ. 32.83 ಕೋಟಿ (20% of EPC of Rs. 164.13 Crore)<br>
• ರಿಯಾಯಿತಿ ಅವಧಿ : 10 ವರ್ಷಗಳು (2 ವರ್ಷ ನಿರ್ಮಾಣ ಅವಧಿ ಮತ್ತು 8 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣಾ ಅವಧಿ)<br>
• ಪ್ರಸ್ತುತ ಯೋಜನಾ ರಸ್ತೆಯು ಕಾರ್ಯಾಚರಣೆ ಮತ್ತು ನಿರ್ವಹಣಾ ಅವಧಿಯಲ್ಲಿದೆ.<br>
• ಟೋಲ್ ಗೇಟ್‌ಗಳ ವಿವರಗಳು
<table>
<tr><th>ಟೋಲ್ ಗೇಟ್ ಗಳ ಸಂಖ್ಯೆ</th><th>ಕಿ.ಮೀ.</th></tr>
<tr><td>1</td><td>8+140 (ಕೊರಳಹಳ್ಳಿ)</td></tr>
<tr><td>2</td><td>23+950 (ಮಾದಪುರ)</td></tr>
</table>
</td>
</tr>
<tr>
<td>ಆ)</td>
<td>ಈ ಟೋಲ್‌ಗೇಟ್‌ಗಳು ಯಾವ ಅಧಾರದ (BOT or Public Funded) ಮೇಲೆ ನಿರ್ಮಾಣವಾಗಿವೆ ಮತ್ತು ಅದಕ್ಕಾಗಿ ಖರ್ಚಾದ ಅನುದಾನವೆಷ್ಟು ಅದು ಎಷ್ಟು ಕಿಲೋಮೀಟರ್ ಇದೆ.</td>
<td>
ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಕಲ್ಯಾಣ ಕರ್ನಾಟಕ ವಿಭಾಗದಡಿ ಈ ಟೋಲ್ ಗೇಟ್‌ಗಳಿಗೆ ಈ ಕೆಳಕಂಡ ಆಧಾರದ ಮೇಲೆ ಕಾಮಗಾರಿ ಕೈಗೊಳ್ಳಲಾಗಿದೆ.<br>
1. ಗಟ್ಟಿ ಬಾಹುಗಳುಳ್ಳ ದ್ವಿಪಥ ರಾಷ್ಟ್ರೀಯ ಹೆದ್ದಾರಿ–50ರ ಹರ್ವಾಲ್ ಟೋಲ್ ಪ್ಲಾಜಾ (ಕಲಬುರಗಿ ಜಿಲ್ಲೆ), ಬಿಜಾಪುರ–ಗುಲ್ಬರ್ಗಾ–ಹುಮ್ನಾಬಾದ್ ರಸ್ತೆಯನ್ನು EPC ಆಧಾರದ ಮೇಲೆ ನಿರ್ಮಿಸಿದ್ದು, ಸೋನುಕುಮಾರ್ ಟೋಲ್ ಶುಲ್ಕ ಗುತ್ತಿಗೆದಾರರು ಆಗಿರುತ್ತಾರೆ. ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.523.00 ಕೋಟಿ ಇರುತ್ತದೆ. ಹಾಗೂ ರಸ್ತೆಯು 79.254 ಕಿ.ಮೀ ಉದ್ದ ಇರುತ್ತದೆ.<br>
2. ಚತುಷ್ಪಥ ರಾಷ್ಟ್ರೀಯ ಹೆದ್ದಾರಿ–65ರ ಮಂಗಲಗಿ ಟೋಲ್ ಪ್ಲಾಜಾ (ಬೀದರ್ ಜಿಲ್ಲೆ) ಮೆ: ಎಲ್‌ಅಂಡ್ ಟಿ ಡೆಕ್ಕನ್ ಟೋಲ್‌ವೇ ಲಿಮಿಟೆಡ್–MH/KN ಬಾರ್ಡರ್ ಈ ರಸ್ತೆಯನ್ನು BOT ಆಧಾರದ ಮೇಲೆ ಸಂಗಾರೆಡ್ಡಿ, ಗುತ್ತಿಗೆದಾರರು ನಿರ್ಮಿಸಿದ್ದು, ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.1544.14 ಕೋಟಿ ಇರುತ್ತದೆ. ಹಾಗೂ ರಸ್ತೆಯು 74.20 ಕಿ.ಮೀ ಉದ್ದ ಇರುತ್ತದೆ.<br><br>
ಕಲ್ಯಾಣ ಕರ್ನಾಟಕದ ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ಒಳಪಡುವ ಬಳ್ಳಾರಿ ವಿಭಾಗದ ಟೋಲ್ ಪ್ಲಾಜಾವನ್ನು BOT Toll Model ಆಧಾರದ ಮೇಲೆ ನೀಡಲಾಗಿರುತ್ತದೆ. ಸದರಿ ಬೈಪಾಸ್ ರಸ್ತೆಯು (1) ಝಡ್.ಪಿ. ರಸ್ತೆ 6.94 ಕಿ.ಮೀ.
</td>
</tr>
</table>

| | | |
|---|---|---|
| | | (2) ಎನ್.ಎಂ.ಡಿ.ಸಿ. ರಸ್ತೆ 1.44 ಕಿ.ಮೀ. (3) ಈಸ್ಟರ್ನ್ ಬೈಪಾಸ್ 7.14 ಕಿ.ಮೀ. (4) ಭುಜಂಗ ನಗರ ಬೈಪಾಸ್ 0.70 ಕಿ.ಮೀ. ಒಟ್ಟು ರಸ್ತೆ 16.228 ಕಿ.ಮೀ. ಹೊಂದಿರುತ್ತದೆ.<br><br>ಕೆ.ಆರ್.ಡಿ.ಸಿ.ಎಲ್ ವತಿಯಿಂದ ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವ / (PPP Project) (Viability Gap Funding) ಪಾಲುದಾರಿಕೆ ಯೋಜನೆ ಅಡಿಯಲ್ಲಿ ಈ ಕೆಳಕಂಡ 2 ರಾಜ್ಯ ಹೆದ್ದಾರಿಗಳನ್ನು ಅಭಿವೃದ್ಧಿಪಡಿಸಲಾಗಿದ್ದು, ಅನುದಾನ ಮತ್ತು ವೆಚ್ಚದ ವಿವರಗಳು ಇಂತಿವೆ:<br>ಸದರಿ ಟೋಲ್ ಗೇಟ್‌ಗಳಿಗೆ ಟೋಲ್ ಸಂಗ್ರಹ ಮಾಡುವ ಹಣವನ್ನು ಸರ್ಕಾರದಿಂದಲೇ ನಿಗಧಿಪಡಿಸಲಾಗುವುದು.<br>1. ವಾಗ್ಧಾರಿ-ರಿಬ್ಬನ್‌ಪಲ್ಲಿ ರಸ್ತೆ ಅಗಲೀಕರಣ ಮತ್ತು ಅಭಿವೃದ್ಧಿ ಕಾಮಗಾರಿ ಪಿಪಿಪಿ-ಬಿ.ಓ.ಟಿ-ವಿ.ಜಿ.ಎಫ್ (ಶುಲ್ಕ) ಆಧಾರದ ಅಡಿಯಲ್ಲಿ ಅಭಿವೃದ್ಧಿ.<br>• ಯೋಜನಾ ರಸ್ತೆಯ ವಿಸ್ತೀರ್ಣ : 135.85 ಕಿ.ಮೀ ಉದ್ದ<br>• ಅನುಮೋದಿತ ಹಾಗೂ ಬಿಡುಗಡೆ ಮಾಡಲಾದ ಒಟ್ಟಾರೆ ವಿಜಿಎಫ್ ಮೊತ್ತ : ರೂ.90.66 ಕೋಟಿ<br>• ಕೇಂದ್ರ ಸರ್ಕಾರದ ಪಾಲು : ರೂ.47.71 ಕೋಟಿ<br>• ರಾಜ್ಯ ಸರ್ಕಾರದ ಪಾಲು : ರೂ.42.95 ಕೋಟಿ<br><br>2. ಗಿಣಿಗೇರಾ-ಗಂಗಾವತಿ-ಸಿಂಧನೂರು (ರಾ.ಹೆ-23) ರಲ್ಲಿ ಸರಪಳಿ.79+000 ರಿಂದ 162+000 ರವರೆಗೆ 83+000 ಕಿ.ಮೀ ಉದ್ದದ ರಸ್ತೆಯನ್ನು ಪಿಪಿಪಿ-ಡಿ.ಬಿ.ಎಫ್.ಓ.ಟಿ-ವಿಜಿಎಫ್-(ಶುಲ್ಕ) ಆಧಾರದಲ್ಲಿ ಅಭಿವೃದ್ಧಿ<br>• ಯೋಜನಾ ರಸ್ತೆಯ ವಿಸ್ತೀರ್ಣ : 83.00 ಕಿ.ಮೀ ಉದ್ದ<br>• ಅನುಮೋದಿತ ಹಾಗೂ ಬಿಡುಗಡೆ ಮಾಡಲಾದ ವಿಜಿಎಫ್ ಮೊತ್ತ: ರೂ.4.59 ಕೋಟಿ ಮಾತ್ರ ಕೇಂದ್ರ ಸರ್ಕಾರದಿಂದ ಭರಿಸಲಾಗಿದೆ. |
| ಇ) | ಈ ಟೋಲ್‌ಗೇಟ್‌ಗಳಿಗೆ ಟೋಲ್ ಸಂಗ್ರಹ ಮಾಡುವ ಹಣ ನಿಗಧಿಪಡಿಸುವುದು ಸರ್ಕಾರವು ಅಥವಾ ಟೋಲ್‌ಗಳೇ; (ಬೈಕ್, ಕಾರು, ಟೆಂಪೋ, ಲಾರಿ, ಬಸ್‌ಗೆ) ಯಾವ ಆಧಾರದ ಮೇಲೆ ನಿಗದಿಪಡಿಸ ಲಾಗುವುದು; | ರಾಷ್ಟ್ರೀಯ ಹೆದ್ದಾರಿ ಶುಲ್ಕ ನಿಯಮಗಳು-2008ರ ಪ್ರಕಾರ ಭಾರತೀಯ ಗೆಜೆಟ್ S.O.838(E) ದಿನಾಂಕ:05.12.2008ರ ನಂತರದ ತಿದ್ದುಪಡಿಗಳ ಪ್ರಕಾರ ಬಳಕೆದಾರರು ಶುಲ್ಕವನ್ನು ಸರ್ಕಾರವು ನಿಗಧಿಪಡಿಸುತ್ತದೆ. ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.<br><br>ಕಲ್ಯಾಣ ಕರ್ನಾಟಕದ ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ಒಳಪಡುವ ಬಳ್ಳಾರಿ ವಿಭಾಗದ ಟೋಲ್ ಪ್ಲಾಜಾವನ್ನು BOT Toll Model ಆಧಾರದ ಮೇಲೆ ನೀಡಲಾಗಿದ್ದು, ಸರ್ಕಾರ ನಿಗಧಿಪಡಿಸಿದಂತೆ ಟೋಲ್ ಹಣವನ್ನು ಸಂಗ್ರಹಿಸಲಾಗುತ್ತಿದೆ. |

ಕೆ.ಆರ್.ಡಿ.ಸಿ.ಎಲ್ ವತಿಯಿಂದ ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ನಿರ್ಮಿಸಿರುವ ಸದರಿ ಯೋಜನಾ ರಸ್ತೆಗಳಲ್ಲಿ ಟೋಲ್ ಸಂಗ್ರಹ ಮಾಡುವ ಹಣವನ್ನು ಸರ್ಕಾರದ ವತಿಯಿಂದಲೇ ನಿಗಧಿಪಡಸಲಾಗುವುದು. ರಿಯಾಯಿತಿ ಕರಾರಿನಲ್ಲಿ ಅವಕಾಶವಿರುವಂತೆ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಪಿಡಬ್ಲ್ಯೂಡಿ/18/ಇಎಪಿ/2009 (ಪಿ1) ದಿನಾಂಕ:26-05-2009 ರ ಅನ್ವಯ ವಿವಿಧ ಮಾದರಿಯ ವಾಹನಗಳಿಗೆ ನಿಗಧಿಪಡಿಸಿರುವ ಮೂಲ ದರಗಳು ಈ ಕೆಳಕಂಡಂತಿರುತ್ತದೆ.

| ಕ್ರಮ ಸಂಖ್ಯೆ | ವಾಹನ ಮಾದರಿ | ಮೂಲ ಟೋಲ್ ದರ (ಪ್ರತಿ ಕಿ.ಮೀ ಪ್ರತಿ ಟ್ರಿಪ್ ಗೆ) 4 ಪಥ ಮತ್ತು ಮೇಲ್ಪಟು | ಮೂಲ ಟೋಲ್ ದರ (ಪ್ರತಿ ಕಿ.ಮೀ ಪ್ರತಿ ಟ್ರಿಪ್ ಗೆ) 2 ಪಥ |
|---|---|---|---|
| 1 | ಕಾರು/ಜೀಪು/ವ್ಯಾನು ಅಥವಾ ಲಘು ವಾಹನ | 0.65 | 0.50 |
| 2 | ಲಘು ವಾಣಿಜ್ಯ ವಾಹನ, ಲಘು ಗೂಡ್ಸ್ ವಾಹನ ಅಥವಾ ಮಿನಿ ಬಸ್ | 1.05 | 0.75 |
| 3 | ಬಸ್, ವಾಣಿಜ್ಯ ವಾಹನ (ಎರಡುಆಕ್ಸಲ್) | 2.20 | 1.50 |
| 4 | ಭಾರಿ ನಿರ್ಮಾಣ ಯಂತ್ರೋಪಕರಣ (HCM), ಅರ್ಥ್ ಮೂವಿಂಗ್ ಎಕ್ವಿಪ್‌ಮೆಂಟ್ (EME) ಅಥವಾ ಮಲ್ಟಿ ಆಕ್ಸಲ್ ವಾಹನ (MAV) (ಮೂರು ರಿಂದ ಆರು ಆಕ್ಸಲ್) | 3.45 | 2.25 |
| 5 | ಭಾರಿ ಗಾತ್ರದ ವಾಹನಗಳು (ಏಳು ಅಥವಾ ಹೆಚ್ಚಿನ ಆಕ್ಸಲ್‌ಗಳು) | 4.20 | 3.00 |

ಸದರಿ ಮೂಲ ದರಗಳನ್ನು ಅಧರಿಸಿ ಅಧಿಸೂಚನೆ ನಿಯಮಗಳ ಅನ್ವಯ ಟೋಲ್ ರಸ್ತೆಯ ಉದ್ದ, ಅಗಲ, ಬೈಪಾಸ್ ರಸ್ತೆಗಳು, ಟೋಲ್ ರಸ್ತೆಯಲ್ಲಿ 60ಮೀ.ಗಿಂತ ಉದ್ದವಾಗಿರುವ ಸೇತುವೆಗಳು, ಇವುಗಳನ್ನು ಪರಿಗಣಿಸಿ ಆಯಾ ರಸ್ತೆಗೆ ಟೋಲ್ ಸುಂಕವನ್ನು ನಿಗಧಿಪಡಿಸಲಾಗುತ್ತದೆ. ಯಾವುದೇ ಟೋಲ್ ರಸ್ತೆಗೆ ದರಗಳನ್ನು ನಿಗಧಿಪಡಿಸುವಾಗ ಈ ಕೆಳಕಂಡ ನಿಯಮಗಳನ್ನು ಪರಿಗಣಿಸಲಾಗುತ್ತದೆ:-

ಅ) ಸದರಿ ಮೂಲ ದರಗಳನ್ನು ಆಧಾರಿಸಿ ಪ್ರತಿ ವರ್ಷ ಏಪ್ರಿಲ್ 01 ರಂದು ಪರಿಷ್ಕೃತ ದರಗಳನ್ನು ನಿಗದಿಪಡಿಸಿ ಗೆಜೆಟ್ ಪ್ರಕಟಣೆಯನ್ನು ಹೊರಡಿಸಲಾಗುವುದು. ಮೂಲ ದರಗಳು 2007-08 ವರ್ಷಕ್ಕೆ ಅನ್ವಯವಾಗುತ್ತಿದ್ದು, ಪ್ರತಿ ವರ್ಷ ಈ ದರಗಳಿಗೆ ಶೇಕಡ 3 ರಷ್ಟು Adhoc ಹೆಚ್ಚಳ ಮತ್ತು WPI index ಆಧಾರಿತ ಹೆಚ್ಚಳವನ್ನು ಸೇರಿಸಿ ಮೂಲ ದರಗಳನ್ನು ಪರಿಷ್ಕರಿಸಲಾಗುತ್ತದೆ.

| | | |
|---|---|---|
| ಈ) | ಈ ಟೋಲ್‌ಗಳಲ್ಲಿ ಸಾರ್ವಜನಿಕರಿಗೆ ಯಾವ ಯಾವ ಸವಲತ್ತುಗಳು ಕಡ್ಡಾಯವಾಗಿ ದೊರಕಲಿವೆ; ಈ ಎಲ್ಲಾ ಸೌಲಭ್ಯ ಎಲ್ಲಾ ಟೋಲ್ ಕೇಂದ್ರಗಳಲ್ಲಿ ಇವೆಯೇ; | ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುವಂತೆ, ಟೋಲ್ ಗೇಟ್‌ಗಳಲ್ಲಿ ಸಾರ್ವಜನಿಕರಿಗೆ ಸಾರ್ವಜನಿಕ ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ Mini nest ಇತ್ಯಾಧಿ ಸೌಲಭ್ಯಗಳನ್ನು ಟೋಲ್ ಕೇಂದ್ರಗಳಲ್ಲಿ ಒದಗಿಸಲಾಗಿದೆ.<br><br>ಸರ್ಕಾರದ ಅಧಿಸೂಚನೆ ದಿನಾಂಕ:26-05-2009 ರಲ್ಲಿನ ಹಾಗೂ ರಿಯಾಯಿತಿ ಕರಾರಿನ ನಿಯಮಾವಳಿಯಂತೆ ಟೋಲ್ ಗೇಟ್‌ನಿಂದ 10.00 ಕಿ.ಮೀ. ಅಂತರದಲ್ಲಿ ವಾಸಿಸುವ. ನಿವಾಸಿಗಳಿಗೆ ಟೋಲ್ ಅಧಿಸೂಚನೆಯಲ್ಲಿ ಲೋಕಲ್ ಪಾಸ್ ಸೌಲಭ್ಯವಿದ್ದು ಸರ್ಕಾರ ನಿಗಧಿಪಡಿಸಿದ ಮೊತ್ತವನ್ನು ಪಾವತಿಸಿ ಲೋಕಲ್ ಪಾಸ್ ಪಡೆಯಬಹುದಾಗಿರುತ್ತದೆ.<br><br>ಸರ್ಕಾರದ ಅಧಿಸೂಚನೆ ಸಂಖ್ಯೆ:ಲೋಇ 18 ಇಎಪಿ (ಪಿ1) ದಿನಾಂಕ:26-05-2009 ಮತ್ತು ಲೋಇ: 06 ಇಎಪಿ 2012(ಪಿ3), ದಿನಾಂಕ:07-03-2015 ರಲ್ಲಿ ತಿಳಿಸಿರುವ ಸೌಲಭ್ಯಗಳು ಎಲ್ಲಾ ಟೋಲ್ ಗೇಟ್‌ಗಳಲ್ಲಿ ಈ ಕೆಳಕಂಡಂತೆ ಇರುತ್ತದೆ.<br><br>1. ದ್ವಿಚಕ್ರ ಹಾಗೂ ತ್ರಿಚಕ್ರ ವಾಹನಗಳು, ಟ್ರ್ಯಾಕ್ಟರ್‌ಗಳು, ಎತ್ತಿನ ಗಾಡಿಗಳು ಮತ್ತು ಟ್ರೈಲರ್‌ಗಳಿಗೆ ಟೋಲ್ ಶುಲ್ಕದಿಂದ ವಿನಾಯಿತಿ ಇರುತ್ತದೆ.<br>2. ರಸ್ತೆ ಬಳಕೆದಾರರು Daily Pass ಮತ್ತು Monthly Pass ಗಳನ್ನು ಪಡೆಯುವುದರ ಮೂಲಕ ರಿಯಾಯಿತಿಯನ್ನು ಪಡೆಯಬಹುದಾಗಿದೆ.<br>3. ಟೋಲ್ ಪ್ಲಾಜಾದಿಂದ 10/20 ಕಿ.ಮೀ ಅಂತರದೊಳಗೆ ವಾಸಿಸುವ ಖಾಸಗಿ ವಾಹನಗಳಿಗೆ ಲೋಕಲ್ ಪಾಸ್ ಸೌಲಭ್ಯವಿದ್ದು ಮಾಹೆಗೆ ರೂ.205 ಪಾವತಿಸಿ ಲೋಕಲ್ ಪಾಸ್ ಪಡೆಯುವುದರ ಮೂಲಕ ರಿಯಾಯಿತಿಯನ್ನು ರಸ್ತೆ ಬಳಕೆದಾರರು ಪಡೆಯಬಹುದಾಗಿದೆ.<br>4. ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರಕ್ಕೆ ಸೇರಿದ ಎಲ್ಲಾ ವಾಹನಗಳು ಮತ್ತು ಸರ್ಕಾರದ ಕರ್ತವನ್ಯ/ಸೇವೆಯ ಮೇಲೆ ಇರುವ ವಾಹನಗಳು,<br>5. ಗೌರವಾನ್ವಿತ ಸಂಸದರು ಮತ್ತು ಶಾಸಕಾಂಗ ಸಭೆಯ ಸದಸ್ಯರಿಗೆ ಸೇರಿದ ವಾಹನಹಗಳು<br>6. ಭಾರತ ಸರ್ಕಾರದ ಕರ್ತವ್ಯದಲ್ಲಿರುವ ರಕ್ಷಣಾ ಇಲಾಖೆಯ ಎಲ್ಲಾ ವಾಹನಗಳು<br>7. ಆಂಬ್ಯುಲೆನ್ಸ್‌ಗಳು<br>8. ಅಗ್ನಿಶಾಮಕ ದಳಗಳು<br>9. ಭಾರತೀಯ ಅಂಚೆ ಮತ್ತು ಟೆಲಿಗ್ರಾಫ್ ಇಲಾಖೆಗೆ ಸೇರಿದ ವಾಹನಗಳು<br>10. ಸ್ವಾತಂತ್ರ ಹೋರಾಟಗಾರರು ಮತ್ತು ಮಾನ್ಯತೆ ಪಡೆದ ಪತ್ರಕರ್ತರಿಗೆ ಸೇರಿದ |

| | | |
|---|---|---|
| ಉ) | ಸೌಲತ್ತುಗಳನ್ನು ದಾಖಲಿಸದ ಟೋಲ್‌ಗಳ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು (ವಿವರ ನೀಡುವುದು) | ಗುತ್ತಿಗೆ ಕರಾರಿನ್ವಯ ಎಲ್ಲಾ ಗೇಟ್‌ಗಳಿಗೂ ಸೌಲತ್ತುಗಳನ್ನು ಒದಗಿಸಲಾಗುತ್ತಿದೆ. ಆದರೆ ಸವಲತ್ತುಗಳನ್ನು ಒದಗಿಸದಿದ್ದಲ್ಲಿ ಗುತ್ತಿಗೆ ಕರಾರಿನನ್ವಯ ಕ್ರಮ ಕೈಗೊಳ್ಳಲಾಗುವುದು. |

ಕಡತ ಸಂಖ್ಯೆ: ಲೋಇ 65 ಸಿಐಎಸ್ 2022 (ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು